ನನ್ನ ಓದು

# ಪ್ರಭುತ್ವ ಮತ್ತು ಜನತೆ

## ಕಾದಂಬರಿಯ ಕಣ್ಣೋಟದಲ್ಲಿ



**ರಾಜೇಂದ್ರ ಚೆನ್ನಿ**

ಗಜಾನನ ಶರ್ಮಾ ಅವರ ಕಾದಂಬರಿ 'ಪುನರ್ವಸು' ಕನ್ನಡದ ಪ್ರಮುಖ ಕಾದಂಬರಿಗಳಲ್ಲಿ ಒಂದಾಗಿರುವುದಕ್ಕೆ ಕಾರಣವೆಂದರೆ, ಅದು ನಮ್ಮ ಕಾಲದ ಬಹುಮುಖ್ಯ ಪ್ರಶ್ನೆಗಳನ್ನು ಸರಿಸುಮಾರು 80 ವರ್ಷಗಳ ಹಿಂದಿನ (ನಿರೂಪಣೆಯು ಇನ್ನೂ ಎರಡು ದಶಕಗಳ ಹಿಂದೆ ಚಾಚಿಕೊಳ್ಳುತ್ತದೆ) ವಾಸ್ತವಿಕ ಸಂದರ್ಭವೊಂದರ ಮೂಲಕ ಎತ್ತುವುದು. ಸಂದರ್ಭವೆಂದರೆ, ಜೋಗ್ ಜಲವಿದ್ಯುತ್ ಯೋಜನೆಯ ಅನುಷ್ಠಾನದಿಂದ ಉಂಟಾದ ಮುಳುಗಡೆ ಮತ್ತು ಅದರ ಪರಿಣಾಮವಾಗಿ ಉಂಟಾದ ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದಲಾವಣೆಗಳು. ಹತ್ತಿರದ ಸಾಗರ ಪಟ್ಟಣವನ್ನು, ಕಾರ್ಗಲ್ ಪೇಟೆಯನ್ನು ನೋಡದೆ ಮಲೆನಾಡಿನ ಅನೇಕ ತಲೆಮಾರುಗಳು ತಮ್ಮದೇ ಆದ ಬದುಕನ್ನು ನಡೆಸುತ್ತ ಬಂದಿವೆ. ಈ ಬದುಕು ಅಲ್ಲಿಯ ಪರಿಸರದೊಂದಿಗೆ, ಕಾಡು, ಮಳೆ, ಋತುಮಾನ, ನಂಬಿಕೆಗಳು ದೈವಗಳು, ಕಷ್ಟಕಾರ್ಪಣ್ಯಗಳು, ಇವುಗಳೊಂದಿಗೆ ಅದೆಷ್ಟು ಹೆಣೆದುಕೊಂಡಿದೆಯೆಂದರೆ ಅವುಗಳಾಚೆಗೆ ಆ ಬದುಕಿಗೆ ಅಸ್ತಿತ್ವವಿಲ್ಲ, ಅರ್ಥವೂ ಇಲ್ಲ. ಇಂಥದನ್ನು ಸಾಂಪ್ರದಾಯಿಕವಾಗಿ organic community, ಅಂದರೆ ಸಾವಯವ ಸ್ವರೂಪದ ಸಮುದಾಯವೆಂದು ಕರೆಯಲಾಗುತ್ತಿದ್ದು, ಇಂಥ ಸಮುದಾಯವು ಬದಲಾವಣೆ, ಆಧುನಿತೆಯಿಂದಾಗಿ ಕಳೆದುಹೋಯಿತು ಎನ್ನುವ ಮರು ಹಂಬಲವೂ ಸಾಹಿತ್ಯದ ಪ್ರಮುಖ ವಸ್ತು.

ಇಂಗ್ಲಿಷ್ ಸಂಪ್ರದಾಯದಲ್ಲಿ ಆಲಿವರ್ ಗೋಲ್ಡ್‌ಸ್ಮಿತ್‌ನ 'The Deserted Village' ಪದ್ಯ, ಥಾಮಸ್ ಹಾರ್ಡಿಯ ಕಾದಂಬರಿಗಳು, 19ನೇ ಶತಮಾನದ ರೊಮ್ಯಾಂಟಿಕ್ ಕಾವ್ಯ ಇವೆಲ್ಲವೂ ಈ ವಸ್ತುವಿನ ಬಗ್ಗೆ ಇವೆ. ಕನ್ನಡ ಬರಹದಲ್ಲಿ ಕಾರಂತರ ಕೆಲವು ಕಾದಂಬರಿಗಳು, 'ಚಂದವಳ್ಳಿಯ ತೋಟ', 'ಗ್ರಾಮಾಯಣ', 'ರಂಗಣ್ಣನ ಕನಸಿನ ದಿನಗಳು' ಇವೂ ಆಂಶಿಕವಾಗಿ ಈ ವಸ್ತುವಿನ ಬಗ್ಗೆ ಇವೆ. ಇಂಥ ಮರುಹಂಬಲದ ಕೃತಿಗಳಲ್ಲಿ ಕಳೆದುಹೋದ ಕಾಲವನ್ನು ಭಾವುಕವಾಗಿ ಆದರ್ಶೀಕರಿಸಲಾಗುತ್ತದೆ, ಹಾಗೆ ಮಾಡುವುದಕ್ಕೋಸ್ಕರ ಆ ಕಾಲದ ಅನೇಕ ಅಪಸವ್ಯಗಳನ್ನು ಹೊರಗಿಡಲಾಗುತ್ತದೆ ಎನ್ನುವ ವಿಮರ್ಶೆಯು ಪ್ರಬಲವಾಗಿಯೇ ಇದೆ. ಚಾರಿತ್ರಿಕವಾದ ವಸ್ತುನಿಷ್ಠತೆಯ ಬದಲು ಇಲ್ಲಿರುವುದು ನೆನಪುಗಳು, ಸೆಲೆಕ್ಟಿವ್ ಆದಂಥ ಆಯ್ಕೆ ಮತ್ತು ನಿರೂಪಣೆ ಎನ್ನುವುದು ಈ ವಿಮರ್ಶೆಯ ವಾದ. 'ಪುನರ್ವಸು' ಕಾದಂಬರಿಯ ಶಕ್ತಿ ಇರುವುದು ಅದು ಗತಕಾಲದ ಕಣ್ಮರೆಯನ್ನು ತೀವ್ರ ಭಾವುಕವಾಗಿ ನೋಡುತ್ತಲೇ ಚರಿತ್ರೆಯ ಅನಿವಾರ್ಯತೆಯನ್ನೂ ಗಮನಿಸುತ್ತದೆ.

ಜೋಗ್ ಜಲವಿದ್ಯುತ್ ಯೋಜನೆ ಈ